ಈ ಬಗ್ಗೆ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ವತಿಯಿಂದ ಸದರಿ ಗುತ್ತಿಗೆದಾರರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದ್ದು, ಟೆಂಡರಿನ ಷರತ್ತಿನ ಅನ್ವಯ ಸೂಕ್ತವಾದ ಕ್ರಮ ತೆಗೆದುಕೊಳ್ಳಲಾಗುವುದು.

ಸೌರಶಕ್ತಿ ಘಟಕಗಳನ್ನು ಅಳವಡಿಸುವುದು

1862, ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮಿ ಲೇಔಟ್)

ಬೆಂಗಳೂರು ನಗರದಲ್ಲಿನ ವಸತಿ, ವಾಣಿಜ್ಯ, ಶಿಕ್ಷಣ, ಕೈಗಾರಿಕೆ ಸಂಸ್ಥೆಗಳ ಮೇಲ್ಛಾವಣಿ ಮೇಲೆ ಸೌರಶಕ್ತಿ ಘಟಕಗಳನ್ನು ಅಳವಡಿಸುವ ಯೋಜನೆಯ ರೂಪರೇಷೆಗಳು ಮತ್ತು ನಾಗರೀಕರು ಅನುಸರಿಸಬೇಕಾದ ನಿಯಮಗಳ ವಿವರಗಳು ಕೆಳಕಂಡಂತಿವೆ.

ಮೇಲ್ಛಾವಣಿ ಸೌಕಶಕ್ತಿ ಪಿ.ವಿ. ವ್ಯವಸ್ಥೆಯ ಸಂಪರ್ಕವನ್ನು ಪಡೆದುಕೊಳ್ಳುವುದಕ್ಕಾಗಿ ಸಾಮಾನ್ಯ ಸೂಚನೆಗಳು

1. ಬೆ.ವಿ.ಕಂಪನಿಯ ಗ್ರಾಹಕರಾಗಿದ್ದು, ಗೃಹಬಳಕೆ, ವಾಣಿಜ್ಯ, ಶಿಕ್ಷಣ ಸಂಸ್ಥೆ, ಕೈಗಾರಿಕೋದ್ಯಮ ಇತ್ಯಾದಿ ಪ್ರವರ್ಗದ ಆಸಕ್ತ ಅರ್ಜಿದಾರರು www.bescom.org ಬೆ.ವಿ.ಕಂಪನಿ ಜಾಲತಾಣದಿಂದ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

2. ಮೇಲ್ಛಾವಣಿ ಸೌರಶಕ್ತಿ ಪಿ.ವಿ. ವ್ಯವಸ್ಥೆಗೆ, ಎಂ.ಎನ್.ಆರ್.ಇ. ಸಹಾಯಧನ ಪಡೆದುಕೊಳ್ಳುವ ಅರ್ಜಿದಾರರು ಕನಿಷ್ಠ 1.0 ಕೆ.ಡಬ್ಲ್ಯು.ಪಿ.ಸಾಮರ್ಥ್ಯದಿಂದ ಗರಿಷ್ಠ 500 ಕೆ.ಡಬ್ಲ್ಯು.ಪಿ. ಸಾಮರ್ಥ್ಯದವರೆಗೂ ಅರ್ಜಿಯನ್ನು ಸಲ್ಲಿಸಬಹುದು. ಎಂ.ಎನ್.ಆರ್.ಇ.ಸಹಾಯಧನ ಪಡೆದುಕೊಳ್ಳದ ಅರ್ಜಿದಾರರು 1.0 ಎಮ್.ಡಬ್ಲ್ಯು.ಪಿ. ಸಾಮರ್ಥ್ಯದವರೆಗೂ ಅರ್ಜಿಯನ್ನು ಸಲ್ಲಸಬಹುದು.

3. ಪಾವತಿಸಬೇಕಾದ ಶುಲ್ಕದ ವಿವರ ಹೀಗಿದೆ:

ಕ್ರ. ಸಂ.	ಪ್ರಸ್ತಾಪಿತ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಸಾಮರ್ಥ್ಯ	ನೋಂದಣಿ ಶುಲ್ಕ (₹ ಗಳಲ್ಲಿ)	ಅನುಕೂಲ ಒದಗಿಸುವಿಕೆ ಶುಲ್ಕ (₹ ಗಳಲ್ಲಿ) (Facilitation Charges)
1	5.0 ಕೆ.ಡಬ್ಲ್ಯು.ಪಿ. ಸಾಮರ್ಥ್ಯದವರೆಗಿನ	500	1000
2	5.0 ಕೆ.ಡಬ್ಲ್ಯು.ಪಿ.ಗಿಂತ ಅಧಿಕ ಹಾಗೂ 50ಕೆ.ಡಬ್ಲ್ಯು.ಪಿ.ಗಿಂತ ಕಡಿಮೆ (67 ಎಚ್.ಪಿ/59 ಕೆ.ವಿ.ಎ.)	1000	2000
3	50 ಕೆ.ಡಬ್ಲ್ಯು.ಪಿ.ಗಿಂತ ಅಧಿಕ ಹಾಗೂ (67ಎಚ್.ಪಿ/59ಕೆ.ವಿ.ಎ.) ಹಾಗೂ 500 ಕೆ.ಡಬ್ಲ್ಯು.ಪಿ.ವರೆಗೆ	2000	5000

4. ಅರ್ಜಿದಾರರು ಮೇ.ಸೌ.ಶ.ಪಿ.ವಿ.ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸದರಿ ವ್ಯವಸ್ಥೆಯ ವಿನ್ಯಾಸ. ಸರಬರಾಜು ಹಾಗೂ ಸ್ಥಾಪನಗೊಳಿಸುವ ಅನುಭವವಿರುವ ಪ್ರಸಿದ್ಧ ಅಳವಡಿಕೆದಾರರನ್ನು ಆಯ್ಕೆ ಮಾಡತಕ್ಕದ್ದು.

5. ಮಾಪಕಗಳ ಅನುಮೋದಿತ ವೆಂಡರುಗಳ ಪಟ್ಟಿಯು ಬೆ.ವಿ.ಕಂಪನಿಯ ಜಾಲತಾಣದಲ್ಲಿ ಲಭ್ಯವಿದೆ.

6. ಎಂ.ಎನ್.ಆರ್.ಇ. ಅನುಮೋದಿತ ತಯಾರಕರ ಇನ್‌ವರ್ಟರುಗಳನ್ನೇ ಉಪಯೋಗಿಸತಕ್ಕದ್ದು. ಇನ್‌ವರ್ಟರುಗಳ ಅನುಮೋದಿತ ವೆಂಟರುಗಳ ಪಟ್ಟಿಯು ಎಂ.ಎನ್.ಆರ್.ಇ.ಅನುಮೋದಿತ ಇನ್‌ವರ್ಟರ್ ತಯಾರಕರಾಗಿದ್ದು, ವಿವರ ಬೆ.ವಿ.ಕಂಪನಿ/ ಎಂ.ಎನ್.ಆರ್.ಇ. ಜಾಲತಾಣದಲ್ಲಿ ಲಭ್ಯವಿದೆ. ಐ.ಇ.ಸಿ. ಗುಣಮಾನಕ/ಐ.ಎಸ್.ಮಾನಕಗಳ ಅಗತ್ಯತೆಯನ್ನು ಪೂರೈಸುವ

ಇನ್‌ವರ್ಟರುಗಳು ಮಾತ್ರ ನಮೂನೆ–5ಅ ಪ್ರಕಾರ ಸ್ಥಾಪನಗೊಳಿಸಲು ಅರ್ಹವಾಗಿರುತ್ತವೆ.

7. ಎಂ.ಎನ್.ಆರ್.ಇ. ಚಾನೆಲ್ ಪಾಲುದಾರಿಕೆ ಪಟ್ಟಿಯು ಬೆ.ವಿ.ಕಂಪನಿ /ಎಂ.ಎನ್.ಆರ್.ಇ. ಜಾಲತಾಣದಲ್ಲಿ ಲಭ್ಯವಿದೆ.

8. ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಅಳವಡಿಕೆಯ ನಂತರ, ಸುರಕ್ಷಾ ಗುಣಮಾನಕಗಳ ಪಾಲನಾ ಪೂರೈಕೆಗಾಗಿ, 10ಕೆ.ಡಬ್ಲ್ಯು.ಪಿ.ವರೆಗಿನ ಸಾಮರ್ಥ್ಯದ ಸ್ಥಾಪನಗಳ ತಪಾಸಣಾ ಅಧಿಕಾರಿಯು ಬೆ.ವಿ.ಕಂಪನಿಯ ವಾ, ಕಾ ಮತ್ತು ಪಾ ಉಪವಿಭಾಗದ ಸ.ಕಾ.ನಿ. ಇಂಜಿನಿಯರ್ ರವರದ್ದಾಗಿದ್ದು, 10ಕೆ.ಡಬ್ಲ್ಯು.ಪಿ.ಗಿಂತ ಅಧಿಕ ಸಾಮರ್ಥ್ಯದ ಸ್ಥಾಪನಗಳ ತಪಸಣಾಧಿಕಾರಿಯು ಕರ್ನಾಟಕ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರಾಗಿರುತ್ತಾರೆ.

9. ಸ.ಇ.ವಿ.ಮಾರ್ಗದರ್ಶಕಗಳ ಅನ್ವಯ, ಅರ್ಜಿದಾರರು ಬೆ.ವಿ.ಕಂಪನಿ ಅನುಮೋದಿತ ಯಾವುದೇ ವೆಂಡರುಗಳಿಂದ ಬೈ–ಡೈರೆಕ್ಷನಲ್ ಮಾಪಕವನ್ನು ಖರೀದಿಸಬೇಕಾಗಿರುತ್ತದೆ. ಬೈ–ಡೈರೆಕ್ಷನ್ ಮಾಪಕ ವೆಂಡರುಗಳ ಪಟ್ಟಿಯನ್ನು ಬೆವಿಕಂಪನಿಯ ಜಾಲತಾಣದಿಂದ ಪಡೆದುಕೊಳ್ಳಬಹುದಾಗಿದೆ.

10. ಮೇಲ್ಛಾವಣಿ/ಮೇಲಂಗಳವು ಮುಕ್ತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

11. ಅರ್ಜಿದಾರರು ಸದರಿ ಆಸ್ತಿಯ ಮಾಲಿಕರಾಗಿರಬೇಕು ಅಥವಾ ಅಧಿಕೃತ ವ್ಯಕ್ತಿಯಾಗಿರತಕ್ಕದ್ದು. ಆಸ್ತಿಯು ಕಂಪನಿ, ನ್ಯಾಸ, ಸಹಕಾರ ಸಂಸ್ಥೆ, ಪಾಲುದಾರಿಕೆ ಸಂಸ್ಥೆಯ ಹೆಸರಿನಲ್ಲಿದ್ದರೆ, ವ್ಯವಹಾರ, ಕಾಗದಪತ್ರ ವ್ಯವಹರಣೆ, ವಿವಿಧ ಒಪ್ಪಂದಗಳ ಒಡಂಬಡಿಕೆ ಇತ್ಯಾದಿಗಳ ಕೆಲಸಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಧಿಕೃತರನ್ನಾಗಿಸತಕ್ಕದ್ದು. ಅಂತಹ ವ್ಯಕ್ತಿಯು ಆಯಾ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯಿಂದ ಅಧಿಕೃತಗೊಂಡವನಾಗಿರತಕ್ಕದ್ದು. ಪಾಲುದಾರಿಕೆ

ಸಂಸ್ಥೆಯ ವಿಷಯದಲ್ಲಿ, ಅಧಿಕೃತ ಸಹಿದಾರರು ಪಾಲುದಾರರ ಪೈಕಿ ಒಬ್ಬರಾಗಿರತಕ್ಕದ್ದು, ಅಂತಹ ಸಹಿದಾರರಿಗೆ ಇತರ ಪಾಲುದಾರರು ಸಹಮತವನ್ನು ವ್ಯಕ್ತಪಡಿಸಿರತಕ್ಕದ್ದು.

12. ಅಧಿಕೃತಗೊಳಿಸುವಿಕೆ ನಮೂನೆ–1ಎ ಮತ್ತು 1ಬಿ ಹಾಗೂ ಸ್ವಘೋಷಣೆ ನಮೂನೆ 1ಸಿಯನ್ನು ಜಾಲತಾಣದಿಂದ ಪಡೆದುಕೊಳ್ಳಬಹುದಾಗಿದೆ.

13. ಗ್ರಾಹಕರು ಸಹಾಯಧನ ಸೌಲಭ್ಯವನ್ನು ಪಡೆದುಕೊಂಡಿರದಿದ್ದಲ್ಲಿ, ಎಂ.ಎನ್.ಆರ್.ಇ. ಇಂದ ಸೌಲಭ್ಯವನ್ನು ಪಡೆದುಕೊಂಡಿರದ ಬಗ್ಗೆ ಸ್ವಘೋಷಣೆ ದೃಢೀಕರಣವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

14. ನೋಂದಾಯಿತ ಅರ್ಜಿಯನ್ನು ವರ್ಗಾವಣೆ ಮಾಡಲಾಗುವುದಿಲ್ಲ.

15. ಅರ್ಜಿದಾರ ಹಾಗೂ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಅಳವಡಿಕೆದಾರರ ನಡುವೆ ಉಂಟಾಗಬಹುದಾದ ಯಾವುದೇ ಒಪ್ಪಂದಿತ ವಾದವಿವಾದಗಳಿಗೆ ಬೆ.ವಿ.ಕಂಪನಿಯು ಹೊಣೆಗಾರಿಕೆಯಾಗುವುದಿಲ್ಲ.

16. ನಿವ್ವಳ ಮಾಪನ ವಿದ್ಯುತ್ ಬಳಕೆ ಎಂದರೆ: ಬೈ ಡೈರೆಕ್ಷನಲ್ ಮಾಪಕದಲ್ಲಿ ದಾಖಲಾದ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯಿಂದ ವಿದ್ಯುತ್ ಜಾಲಕ್ಕೆ ರವಾನೆಯಾದ ವಿದ್ಯುತ್ ಪ್ರಮಾಣದ ರೀಡಿಂಗ್ ಹಾಗೂ ಮಾರಾಟಗಾರನು ತನ್ನ ಬಳಕೆಗಾಗಿ ಜಾಲದಿಂದ ಪಡೆದುಕೊಂಡ ವಿದ್ಯುತ್ ಪ್ರಮಾಣದ ರೀಡಿಂಗ್ ನಡುವಿನ ವ್ಯತ್ಯಾಸ.

17. ಮೇಲ್ಛಾವಣಿ ಸ್ಥಾಪನದಿಂದ ಹೆಚ್ಚುವರಿ ವಿದ್ಯುತ್ತನ್ನು ರವಾನೆ ಮಾಡುವುದರ ವಿದ್ಯುತ್ ದರವು ಕ.ವಿ.ನಿ. ಆಯೋಗವು ಕಾಲಕಾಲಕ್ಕೆ ನಿರ್ಧರಿಸುವ ಚಾಲ್ತಿ ವಿದ್ಯುತ್ ದರಗಳ ಪ್ರಕಾರವಿರುತ್ತದೆ (ಪ್ರಸ್ತುತ, ದಿನಾಂಕ 31.03.2018ರವರೆಗೆ, ಸಹಾಯಧನ ಪಡೆಯದ

ಸ್ಥಾಪನೆಗಳಿಗೆ ಯೂನಿಟ್ ಒಂದಕ್ಕೆ ₹ 9.56, ಸಹಾಯಧನ ಪಡೆಯುವ ಸ್ಥಾಪನೆಗಳಿಗೆ ಯೂನಿಟ್ ಒಂದಕ್ಕೆ ₹ 7.20).

18. ಸ್ಥಾಪಿತ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ(ಪ್ರಸ್ತಾಪಿತವೂ) ಸಾಮರ್ಥ್ಯವು, ಆ ಗ್ರಾಹಕರ ಮಂಜೂರಾದ ಹೊರೆಗಿಂತ ಅಧಿಕವಾಗಿದ್ದಲ್ಲಿ, ಮೂಲ ಸೌಕರ್ಯದ {ಅಂದರೆ, ಸೇವಾ ಮಾರ್ಗ, ಮಾಪಕ(ಅಗತ್ಯವಿದ್ದಲ್ಲಿ ಕರೆಂಟ್ ಟ್ರಾನ್ಸ್‌ಫಾರ್ಮರ್ ಸಹಿತ), ಪರಿವರ್ತಕದ ಉನ್ನತೀಕರಣ (ಅಗತ್ಯವಿದ್ದಲ್ಲಿ)} ಉನ್ನತೀಕರಣ, ಗ್ರಾಹಕರು, ಅವರ ಸ್ವಂತ ವೆಚ್ಚದಲ್ಲಿ ತೇವಣಿ ವಂತಿಗೆ ಕಾಮಗಾರಿಯ ಹಾಲಿ ನಿಯಮಗಳ ಪ್ರಕಾರ ಉನ್ನತೀಕರಣ ಕಾರ್ಯವನ್ನು ಕೈಗೊಳ್ಳತಕ್ಕದ್ದು. ಮೂಲ ಸೌಕರ್ಯ ಉನ್ನತೀಕರಣದ ಇತರ ಮಾಹಿತಿಗಳನ್ನು ಸ.ಕಾ.ನಿ.ಇಂ(ವಿ)., ವಾ, ಕಾ ಮತ್ತು ಪಾ ಉಪವಿಭಾಗ, ಬೆ.ವಿ.ಕಂಪನಿ ಇವರಿಂದ ಪಡೆದುಕೊಳ್ಳಬಹುದು.

19. ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ದಾಖಲೆ ಪತ್ರಗಳು ಹೀಗಿವೆ:

ಎ. ಇತ್ತೀಚಿನ ವಿದ್ಯುತ್ ಬಳಕೆ ಶುಲ್ಕ ಬಿಲ್ಲು

ಬಿ. ಕಂಪನಿ/ನ್ಯಾಸ/ಸಹಕಾರಿ ಸಂಸ್ಥೆ/ಪಾಲುದಾರಿಕೆ ಪ್ರಕರಣದಲ್ಲಿ ನಮೂನೆ–1ಎ ಪ್ರಕಾರ ಹಾಗೂ ಪಾಲುದಾರಿಕೆ ಸಂಸ್ಥೆಗಳ ಪ್ರಕರಣದಲ್ಲಿ ನಮೂನೆ–1ಬಿ ಪ್ರಕಾರ ಅಧಿಕೃತಗೊಳಿಸಿರುವಿಕೆ ಪತ್ರ.

ಸಿ. ಎಂ.ಎನ್.ಆರ್.ಇ. ಇಂದ ಪಡೆದು ಸಹಾಯಧನ ಮಂಜೂರಾತಿ ಪತ್ರದ ಪ್ರತಿ/ಎಂ.ಎನ್.ಆರ್.ಇ. ಇಂದ ಸಹಾಯಧನ ಸೌಲಭ್ಯವನ್ನು ಪಡೆದುಕೊಳ್ಳದಿರುವ ಬಗ್ಗೆ ಸ್ವಘೋಷಿತ ದೃಢೀಕರಣ ಪತ್ರ.

20. ಕ.ವಿ.ನಿ.ಆಯೋಗದ ಪ್ರಕಾರ ಅಂತರ್‌ಸಂಪರ್ಕ ವೋಲ್ಟೇಜು ಪ್ರಮಾಣ:

ಕ್ರ.ಸಂ.	ವ್ಯವಸ್ಥೆಯ ಸಾಮರ್ಥ್ಯ	ವೋಲ್ಟೇಜು
1	5 ಕೆ.ಡಬ್ಲ್ಯು.ಪಿ.ವರೆಗೆ	240 ವೋಲ್ಟ್ಸ್
2	5.0 ಕೆ.ಡಬ್ಲ್ಯು.ಪಿ.ಗಿಂತ ಅಧಿಕ ಹಾಗೂ 50 ಕೆ.ಡಬ್ಲ್ಯು.ಪಿ.ಗಿಂತ ಕಡಿಮೆ	415 ವೋಲ್ಟ್
3	50 ಕೆ.ಡಬ್ಲ್ಯು.ಪಿ.ಗಿಂತ ಅಧಿಕ ಹಾಗೂ 500 ಕೆ.ಡಬ್ಲ್ಯು.ಪಿ.ವರೆಗೆ	

21. ಗ್ರಾಹಕರಿಗೆ ಹಾಲಿ ಒದಗಿಸಿರುವ ವಿದ್ಯುತ್ ಸರಬರಾಜು ಸಂಪರ್ಕವು ಒಂದು ಫೇಸಿನದ್ದಾಗಿದ್ದು, ಗ್ರಾಹಕರು ಮೂರು ಫೇಸಿನ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯನ್ನು ಬಯಸಿದರೆ, ಅಂತಹ ಪರಿವರ್ತನೆಯ ಸೌಲಭ್ಯವನ್ನು ಸ.ಕಾ.ನಿ.ಇಂ(ವಿ), ವಾ, ಕಾ ಮತ್ತು ಪಾ ಉಪವಿಭಾಗರವರಿಂದ ಮಂಜೂರು ಮಾಡಿಸಿಕೊಳ್ಳತಕ್ಕದ್ದು.

22. ಸ.ಕಾ.ನಿ.ಇಂ(ವಿ), ವಾ, ಕಾ ಮತ್ತು ಪಾ ಉಪವಿಭಾಗ, ಇವರು ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಸಮೀಕ್ಷಾ ಸಂಪರ್ಕಾಧಿಕಾರಿಯಾಗಿರುತ್ತಾರೆ.

23. ತಾಂತ್ರಿಕ, ಸುರಕ್ಷೆ, ಜಾಲ ಸಂಪರ್ಕ ಗುಣಮಟ್ಟಗಳು, ನಮೂನೆ–5 ರೊಂದಿಗೆ ಲಗತ್ತಿಸಿರುವ ತಾಂತ್ರಿಕ ನಿರ್ದಿಷ್ಟತೆಯನ್ನು ಅನುಸರಿಸತಕ್ಕದ್ದು.

24. ಕ.ವಿ.ನಿ.ಆಯೋಗದ ವಿತರಣ ಸಂಹಿತೆಯ ಪ್ರಕಾರ, ಬೆ.ವಿ. ಕಂಪನಿಯ ಅಧಿಕೃತ ಉದ್ಯೋಗಿಗಳು ಯಾವುದೇ ಸಮಯದಲ್ಲಾಗಲಿ ಸ್ಥಾವರದ ತಪಾಸಣೆಯನ್ನು ನಡೆಸಲು ಹಕ್ಕುಳ್ಳವರಾಗಿರುತ್ತಾರೆ.

25. ಕಾಲಕಾಲಕ್ಕೆ ನಿಗದಿಪಡಿಸಿರುವಂತೆ, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯಲ್ಲಿ ಉತ್ಪಾದಿಸುವ ವಿದ್ಯುತ್ ಸಂಬಂಧಿತ ವಿದ್ಯುಚ್ಛಕ್ತಿ ಶುಲ್ಕ, ಇತರ ಶಾಸನಬದ್ಧ ಶುಲ್ಕಗಳನ್ನು ಗ್ರಾಹಕರು ಪಾವತಿಸತಕ್ಕದ್ದು.

26. ಗ್ರಾಹಕರು, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಮಾಪಕ ಹಾಗೂ ಬೈ-ಡೈರೆಕ್ಷನಲ್ ಮಾಪಕವನ್ನು ಪ್ರತ್ಯೇಕ ಮಾಪಕ ಪೆಟ್ಟಿಗೆಯಲ್ಲಿ ತೀರಾ ಸಮೀಪದಲ್ಲಿ ಅಥವಾ ಅದೇ ಆವರಣದಲ್ಲಿ ಯುಕ್ತ ಸ್ಥಳದಲ್ಲಿ, ಅವಶ್ಯವೆಂದು ಕಂಡುಬಂದಾಗಲೆಲ್ಲಾ ರೀಡಿಂಗನ್ನು ದಾಖಲಿಸಲು ಅನುಕೂಲವಾಗುವಂತೆ ಅಳವಡಿಸತಕ್ಕದ್ದು.

27. ಸೌರಶಕ್ತಿ ಮಾಪಕ ವಾಚನವನ್ನು ಕೇವಲ ಅಂಕಿ-ಅಂಶ ಸಂಗ್ರಹಣೆಗಾಗಿ ಮಾಡಲಾಗುವುದೇ ಹೊರತು, ಬಿಲ್ ತಯಾರಿಕೆಗಾಗಿ ಅಲ್ಲ.

28. ಯಾವುದೇ ವಿಚಾರಣೆ/ದೂರು/ಮಾಹಿತಿಗಾಗಿ, ಅರ್ಜಿದಾರ/ ಗ್ರಾಹಕರು ಸ.ಕಾ.ನಿ.ಇಂ(ವಿ), ವಾ. ಕಾ ಮತ್ತು ಪಾ ಉಪವಿಭಾಗ / ಸೌರಶಕ್ತಿ ಸಹಾಯ ಕೇಂದ್ರ, ಬೇ.ಪ.ನಿ.ಶಾಖೆ, ನಿಗಮ ಕಾರ್ಯಾಲಯ, ಬೆ.ವಿ.ಕಂ ರವರನ್ನು ಸಂಪರ್ಕಿಸಬಹುದಾಗಿದೆ.

29. **ಸಹಾಯಧನ:**

- ಅರ್ಜಿದಾರರು, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಬಂಡವಾಳ ವೆಚ್ಚವನ್ನು, ಎಂ.ಎನ್.ಆರ್.ಇ. ಸಹಾಯಧನವಾಗಿ ಪಡೆಯಬಹುದಾಗಿದೆ.
- ಸಹಾಯಧನ ಸೌಲಭ್ಯವನ್ನು ಪಡೆಯಲು, ಎಂ.ಎನ್.ಆರ್.ಇ. ಮಾರ್ಗದರ್ಶನ ಹಾಗೂ ಗುಣಮಟ್ಟಗಳನ್ನು ಪಾಲಿಸತಕ್ಕದ್ದು. ವಿವರಗಳನ್ನು ಎಂ.ಎನ್.ಆರ್.ಇ. ಜಾಲತಾಣ www.mnre.gov.in ರಿಂದ ಪಡೆದುಕೊಳ್ಳಬಹುದು.

- ಎಂ.ಎನ್.ಆರ್.ಇ. ಸಹಾಯಧನ ಸೌಲಭ್ಯವನ್ನು ಕೆ.ಆರ್.ಇ.ಡಿ.ಎಲ್. ಅಥವಾ ಎಂ.ಎನ್.ಆರ್.ಇ. ಯಾವುದೇ ಚಾನೆಲ್ ಪಾಲುದಾರರಿಂದ ಪಡೆದುಕೊಳ್ಳಬಹುದಾಗಿದೆ.
- ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಬಂಡವಾಳ ವೆಚ್ಚದಲ್ಲಿ, ಕರ್ನಾಟಕ ಸರ್ಕಾರದಿಂದ ಯಾವುದೇ ರೀತಿ ಸಹಾಯಧನ ನೆರವು ಇರುವುದಿಲ್ಲ.

ಮೇಲ್ಛಾವಣಿ ಸೌರಶಕ್ತಿ ಪಿ.ವಿ.ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಅನುಸರಿಸಬೇಕಾದ ವಿಧಾನಗಳು

1. ಅರ್ಜಿದಾರರು, ಆನ್‌ಲೈನ್ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಡನೆ www.bescom.orgನಲ್ಲಿ ಸಲ್ಲಿಸತಕ್ಕದ್ದು.
2. ಅರ್ಜಿಯನ್ನು ಆಯಾ ವ್ಯಾಪ್ತಿಯಲ್ಲಿನ ವಾ, ಕಾ ಮತ್ತು ಪಾ ಉಪವಿಭಾಗದ, ಬೆ.ವಿ.ಕಂಪನಿಯಲ್ಲಿ ಅರ್ಜಿಯ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳುವುದು. ಅರ್ಜಿ ಸ್ವೀಕೃತಿಗೊಂಡಿರುವ ಬಗ್ಗೆ ತಲುಪೊಪ್ಪಿಗೆಯನ್ನು ಪಡೆಯತಕ್ಕದ್ದು.
3. ಸ.ಕಾ.ನಿ.ಇಂ(ವಿ)ರವರು ಸಾಮಾನ್ಯ ನಿಯಮಗಳ ಪ್ರಕಾರ ಪರಿಶೀಲನೆ ನಡೆಸಿ, ಅರ್ಜಿಯನ್ನು ನೋಂದಾಯಿಸಿಕೊಂಡು ರೆವಿನ್ಯೂ ತಪಾಸಣೆಯ ನಂತರ, ಅಧಿಕಾರ ನಿಯೋಜನೆಯ ಅನುಸಾರ ತಾಂತ್ರಿಕ ಕಾರ್ಯಸಾಧ್ಯತಾ ವರದಿಗಾಗಿ ಅರ್ಜಿಯನ್ನು ಸಂಬಂಧಿತ ಶಾಖಾಧಿಕಾರಿ/ಸ.ಕಾ.ನಿ.ಇಂ(ವಿ)/ಕಾ.ನಿ.ಇಂ(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನೆ, ಬೆ.ವಿ.ಕಂಪನಿ ಇವರಿಗೆ ಕಳುಹಿಸತಕ್ಕದ್ದು.
4. ತಾಂತ್ರಿಕ ಕಾರ್ಯಸಾಧ್ಯತಾ ವರದಿಯನ್ನು ಸ್ವೀಕರಿಸಿದ ನಂತರ, ಸ.ಕಾ.ನಿ.ಇಂ(ವಿ), ವಾ, ಕಾ ಮತ್ತು ಪಾ ಉಪವಿಭಾಗ ಇವರು ಅರ್ಜಿದಾರರಿಂದ ಮೇ.ಸೌ.ಶ.ಪಿ.ವಿ.ವ್ಯವಸ್ಥೆಗಾಗಿ ಉಪಯೋಗಿಸಲ್ಪಡುವ ಉಪಕರಣ–ಸಲಕರಣೆಗಳ ತಾಂತ್ರಿಕ ವಿವರಗಳನ್ನು ಪಡೆಯತಕ್ಕದ್ದು.

5. ಅರ್ಜಿದಾರರು, ಅವರ ಇಚ್ಛೆಯಂತೆ ಪ್ರಸಿದ್ಧ ತಯಾರಕರ ಪಿ.ವಿ.ವ್ಯವಸ್ಥೆ, ಇನ್‌ಸ್ಟಾಲರ್, ಇವುಗಳ ತಾಂತ್ರಿಕ ವಿವರಗಳನ್ನು ಪಡೆದುಕೊಂಡು, ಸ್ಥಾಪಿಸಬೇಕೆಂದಿರುವ ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಪಿ.ವಿ.ಮಾಡ್ಯೂಲ್, ಇನ್‌ವರ್ಟರ್, ಇತರ ಉಪಕರಣಗಳ ತಾಂತ್ರಿಕ ವಿವರಗಳನ್ನು, ನಮೂನೆ–5ರ ಪ್ರಕಾರದ ತಾಂತ್ರಿಕ ಪರಿಶೀಲನೆಗಾಗಿ 30 ದಿನಗಳ ಒಳಗೆ ಸಂಬಂಧಿತ ಪಾ, ಕಾ ಮತ್ತು ಪಾ ಉಪವಿಭಾಗ ಕಚೇರಿಗೆ ಸಲ್ಲಿಸತಕ್ಕದ್ದು.

6. ತಾಂತ್ರಿಕ ಪರಿಶೀಲನೆಯ ನಂತರ, ಅಧಿಕಾರ ನಿಯೋಜನೆಯ ಅನುಸಾರ ಸಂಬಂಧಿತ ಪಾ, ಕಾ ಮತ್ತು ಪಾ ಉಪವಿಭಾಗದ ಸ.ಕಾ.ನಿ.ಇಂ(ವಿ)ರವರು ಮೇ.ಸೌ.ಶ.ಪಿ.ವಿ.ವ್ಯವಸ್ಥೆ **ಸ್ಥಾಪನೆಯ ಅನುಮೋದನಾ ಪತ್ರವನ್ನು** ಅರ್ಜಿದಾರರಿಗೆ ನೀಡತಕ್ಕದ್ದು.

7. ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಸ್ಥಾಪನೆಯ ಕಾರ್ಯವು ಪೂರ್ಣಗೊಂಡ ನಂತರ, ಅರ್ಜಿದಾರರು ಕಾರ್ಯಸಮಾಪನಾ ವರದಿಯನ್ನು ಸ.ಕಾ.ನಿ.ಇಂ(ವಿ)/ಕಾ.ನಿ.ಇಂ(ವಿ)ರವರಿಗೆ ಕೆಳಕಂಡ ದಾಖಲೆಗಳ ಸಹಿತ ಸಲ್ಲಿಸತಕ್ಕದ್ದು:

i. ಅನುಕೂಲ ಒದಗಿಸುವಿಕೆ ಶುಲ್ಕ ಪಾವತಿಯ ರಸೀತಿಯ ಪ್ರತಿ.

ii. ಅನುಮೋದಿತ ನಕಾಸೆ ಹಾಗೂ ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ ಇವರಿಂದ ಪಡೆದು ಅನುಷ್ಠಾನಗೊಳಿಸುವಿಕೆಯ ಅನುಮೋದನೆ(10ಕೆ.ಡಬ್ಲ್ಯು.ಪಿ. ಗಿಂತ ಅಧಿಕ ಸಾಮರ್ಥ್ಯದ್ದು)

iii. ಐ.ಟಿ.ವಿಭಾಗ, ಬಿ.ವಿ.ಕಂಪನಿ ಇವರಿಂದ ಪಡೆದ ಬೈ–ಡೈರೆಕ್ಷನಲ್ ಮಾಪಕದ ಪರೀಕ್ಷಾ ದೃಢೀಕರಣ.

iv. ₹ 200/– ಮೌಲ್ಯದ ಛಾಪಾ ಕಾಗದದಲ್ಲಿ ಬೆ.ವಿ. ಕಂಪನಿಯೊಂದಿಗೆ ಮಾಡಿಕೊಂಡ ವಿದ್ಯುತ್ ಖರೀದಿ ಒಪ್ಪಂದ ನಿವೇದನೆ.

v. ಮೇ.ಸೌ.ಶ.ಪಿ.ವಿ.ವ್ಯವಸ್ಥೆಯನ್ನು ಸ್ಥಾಪನೆಗೊಳಿಸಿದವರಿಂದ ನಮೂನೆ–6ಎ ಪ್ರಕಾರ ಪಡೆದ ಕಾರ್ಯ ಸಮಾಪನಾ ವರದಿ.

vi. ಬ್ಯಾಂಕ್ ಹೆಸರು, ಯಾವ ಶಾಖೆ, ವಿಳಾಸ, ಬ್ಯಾಂಕ್ ಖಾತೆಯ ಸ್ವರೂಪ, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ.ಸಂಕೇತ ಇತ್ಯಾದಿ ವಿವರಗಳುಳ್ಳ ಬ್ಯಾಂಕ್ ಪಾಸ್ ಬುಕ್‌ನ ಮೊದಲ ಪುಟದ ಪ್ರತಿ.

ಸ್ಥಾಪನ ಕಾರ್ಯವನ್ನು ಪೂರ್ಣಗೊಳಿಸಲು ಅರ್ಜಿದಾರರಿಗೆ ನೀಡಿರುವ ಗರಿಷ್ಟ ಕಾಲಮಿತಿ 180 ದಿನಗಳು.

8. ಅರ್ಜಿದಾರರು, 10ಕೆ.ಡಬ್ಲ್ಯು.ಪಿ.ವರೆಗಿನ ಪಿ.ವಿ.ವ್ಯವಸ್ಥೆಗೆ ಮುಕ್ತತೆ/ ಅನುಮೋದನೆಯನ್ನು ಸಂಬಂಧಿತ ವ್ಯಾಪ್ತಿಯ ಸ.ಕಾ.ನಿ.ಇಂ(ವಿ), ವಾ, ಕಾ ಮತ್ತು ಪಾ ಉಪವಿಭಾಗ, ಬೆ.ವಿ.ಕಂರವರಿಂದ ಪಡೆದುಕೊಳ್ಳತಕ್ಕದ್ದು. 10ಕೆ.ಡಬ್ಲ್ಯು.ಪಿ.ಗಿಂತ ಹೆಚ್ಚಿನ ಸಾಮರ್ಥ್ಯದ ಸ್ಥಾಪನದ ಸುರಕ್ಷಾ ಗುಣಮಟ್ಟಗಳ ಪರಿಶೀಲನೆಯನ್ನು ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ ಇವರು ನಡೆಸುತ್ತಾರೆ.

9. ಅರ್ಜಿದಾರರು ಸಲ್ಲಿಸಿದ ಕಾರ್ಯ ಸಮಾಪನಾ ವರದಿ ಹಾಗೂ ಎಲ್ಲ ದಾಖಲೆಗಳ ಪರಿಶೀಲನೆಯ ನಂತರ ಸ.ಕಾ.ನಿ.ಇಂ/ ಕಾ.ನಿ.ಇಂ(ವಿ) ರವರು ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಅನುಷ್ಠಾನ ಹಾಗೂ ಪರೀಕ್ಷೆಗಾಗಿ ಮಂಜೂರು ಪತ್ರವನ್ನು ವಿತರಿಸತಕ್ಕದ್ದು.

10. ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಅನುಷ್ಠಾನ, ಪರೀಕ್ಷೆ ಹಾಗೂ ಹೊಂದಾಣಿಕೆಯನ್ನು ಸಂಬಂಧಿತ ಉಪವಿಭಾಗದ/ವಿಭಾಗದ ಇಂಜಿನಿಯರ್‌ರವರಿಂದ ಎಂ.ಟಿ. ಶಾಖೆಯ ಸಿಬ್ಬಂದಿ/ ಶಾಖಾಧಿಕಾರಿಯವರೊಡನೆ ನಡೆಸಲಾಗುತ್ತದೆ.

11. ಮೇ.ಸೌ.ಶ.ಪಿ.ವಿ.ವ್ಯವಸ್ಥೆಯನ್ನು ಬೆ.ವಿ.ಕಂಪನಿ ಜಾಲದೊಂದಿಗೆ ಹೊಂದಾಣಿಕೆ ಮಾಡುವ ಅವಧಿಯಲ್ಲಿ ಬೆ.ವಿ.ಕಂಪನಿ ಅಧಿಕೃತ ಉದ್ಯೋಗಿಗಳು ಬೈ–ಡೈರೆಕ್ಷನಲ್ ಮಾಪಕವನ್ನು ಪರೀಕ್ಷಿಸಿ, ಮಾಪನಾಂಕ ನಿರ್ಣಯ ಮಾಡಿ ಮೊಹರನ್ನು ಹಾಕತಕ್ಕದ್ದು.

12. ಸಂಬಂಧಿತ ಸ.ಕಾ.ನಿ.ಇಂ(ವಿ)/ಕಾ.ನಿ.ಇಂ(ವಿ), ವಾ, ಕಾ ಮತ್ತು ಪಾ ಇವರು ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಹೊಂದಾಣಿಕೆಯ ದೃಢೀಕರಣ ಪತ್ರವನ್ನು ನೀಡುತ್ತಾರೆ.

ಬಿಲ್ ಮಾಡುವಿಕೆ ಹಾಗೂ ಪಾವತಿ:

1. ಮಾಪನ ವಾಚನದ ನಿಗದಿತ ದಿನಾಂಕದಂದು ಇರುವ ನಿವ್ವಳ ಮಾಪಿತ ವಿದ್ಯುತ್ ಪ್ರಮಾಣಕ್ಕೆ ಬೆ.ವಿ.ಕಂಪನಿಯು ಮಾಸಿಕ ವಿದ್ಯುತ್ ಬಿಲ್ಲನ್ನು ನೀಡುತ್ತದೆ.

2. ರವಾನೆ ಮಾಡಿದ ವಿದ್ಯುತ್ ಪ್ರಮಾಣವು ಸ್ವೀಕರಿಸಿದ ವಿದ್ಯುತ್ ಪ್ರಮಾಣಕ್ಕಿಂತ ಅಧಿಕವಾಗಿದ್ದರೆ, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಗ್ರಾಹಕರು ಸ್ವಂತ ಉಪಯೋಗಕ್ಕಾಗಿ ಪಡೆದ ಒಪ್ಪಂದಿತ ದರದ ವಿದ್ಯುತ್ ಪ್ರಮಾಣಕ್ಕೆ ಬೆ.ವಿ.ಕಂಪನಿಯು ಬಿಲ್ ನೀಡಿ, ಆ ಸಂಬಂಧಿತವಾದ ನಿಗದಿತ ಶುಲ್ಕ, ವಿದ್ಯುತ್ ಬಾಕಿ ಇಪ್ಪುಗಳನ್ನು ಹೊಂದಾಣಿಕೆ ಮಾಡಿಕೊಂಡು, ಉಳಿದ ನಿವ್ವಳ ಹೆಚ್ಚುವರಿ ರವಾನಿತ ವಿದ್ಯುತ್ ಪ್ರಮಾಣಕ್ಕೆ, ಬಿಲ್ ನೀಡಿದ 30 ದಿನಗಳ ಒಳಗೆ ಗ್ರಾಹಕರ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ. ಮೂಲಕ ಜಮಾ ಮಾಡುತ್ತದೆ.

3. ರವಾನೆ ಮಾಡಿದ ವಿದ್ಯುತ್ ಪ್ರಮಾಣವು ಸ್ವೀಕರಿಸಿದ ವಿದ್ಯುತ್ ಪ್ರಮಾಣಕ್ಕಿಂತ ಕಡಿಮೆ ಇದ್ದರೆ, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಗ್ರಾಹಕರು ಬೆ.ವಿ.ಕಂಪನಿಗೆ, ಸ್ವೀಕರಿಸಿದ ನಿವ್ವಳ ವಿದ್ಯುತ್ ಪ್ರಮಾಣಕ್ಕೆ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ನಿರ್ಧರಿಸುವ, ಪ್ರಚಲಿತ ಚಾಲ್ತಿ ವಿದ್ಯುತ್ ದರಗಳ ಪ್ರಕಾರ ವಿದ್ಯುತ್ ಬಳಕೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಅಪೆಕ್ಸ್ ಬ್ಯಾಂಕಿನ ಶಾಖೆಗಳು

1863(1087); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಅಪೆಕ್ಸ್ ಬ್ಯಾಂಕಿನ ಶಾಖೆಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ ಈ ಶಾಖೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ತೆರೆಯಲು ಕಾರಣಗಳೇನು?

ಆ) ಇವುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ಹಾಗೂ ಪ್ರತಿ ತಿಂಗಳು ಸಿಬ್ಬಂದಿ ಸಂಬಳ, ಬಾಡಿಗೆ ಇತ್ಯಾದಿಗಳ ಖರ್ಚು ಎಷ್ಟು?

ಇ) ಎಲ್ಲಾ ವ್ಯವಹಾರಗಳಿಗೂ ರಾಷ್ಟ್ರೀಕೃತ ಬ್ಯಾಂಕಿನ ಖಾತೆಯ ಅವಶ್ಯಕತೆ ಇರುವುದರಿಂದ ಈ ಶಾಖೆಗಳಿಗೆ ಹೆಚ್ಚು ವ್ಯವಹಾರವಾಗದೇ ಇರುವುದು ನಿಜವೇ?

ಈ) ಎಲ್ಲಾ ಬಡಾವಣೆಗಳಲ್ಲೂ ಹಲವಾರು ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗಳಿರುವುದರಿಂದ ಕೆಲವು ಶಾಖೆಗಳನ್ನು ಮುಚ್ಚಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ನಗರದಲ್ಲಿ 42 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ.